4318 (4956) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರವಾರ ತಾಲ್ಲೂಕಿನಲ್ಲಿ ಹರಿಯುವ ಕಾಳಿ ನದಿಯಿಂದ ಅನಧಿಕೃತವಾಗಿ ಉಸುಕು (ಮರಳು) ತೆಗೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಗಣಿ ಇಲಾಖೆಯವರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸೇತುವೆ, ರೈಲು ಸೇತುವೆ ಹಾಗೂ ಎನ್.ಹೆಚ್.17 ಸೇತುವೆಗಳ ಸುತ್ತಲೂ ಸುಕು ತೆಗೆಯುತ್ತಿರುವುದರಿಂದ ಸೇತುವೆಗೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಬಂದಿದೆ. Yes.

ಆ) ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ : 22-12-2004 ರಂದು ಸ್ಥಳೀಯ ಮೀನುಗಾರರ ಮತ್ತು ಮರಳು ತೆಗೆಯುವುದರ ನಡುವೆ ಸಮನ್ವಯ ಸಾಧಿಸಿ ಅಧಿಕೃತ ಗಣಿಕಾರಿಕೆಗೆ ಅವಕಾಶ ಮಾಡಿಕೊಡಲು ನಿರ್ಣಯಿಸಿದೆ.

ಇ) ಗಮನಕ್ಕೆ ಬಂದಿದ್ದು, ಆದೇಶ ಸಂಖ್ಯೆ : 17/011/41/95, ದಿನಾಂಕ : 27-04-1996 ರಲ್ಲಿ ಸಿ.ಆರ್.ಜೆಡ್. ಜೋನ್‌ನಲ್ಲಿ ಮರಳು ಗಣಿಗಾರಿಕೆಯನ್ನು ನಿಷೇಧಿಸಲಾಗಿದೆ.

ಈ) ಅಕ್ರಮ ಮರಳು ಗಣಿಗಾರಿಕೆಯನ್ನು ತಡೆಗಟ್ಟಲು ಕಾಳಿ ನದಿ ಪ್ರದೇಶದಲ್ಲಿ 4 ಪ್ರದೇಶಗಳಿಗೆ ಮರಳು ಸಾಗಾಣಿಕೆಗೆ ಅನುಮತಿ ನೀಡಿದೆ. ಮೀನುಗಾರರು ಮತ್ತು ಮರಳು ತೆಗೆಯುವವರ ಮಧ್ಯೆ ಸಮನ್ವಯ ಸಾಧಿಸಿ ಮರಳು ಗಣಿಗಾರಿಕೆಗೆ ಅವಕಾಶ ಮಾಡಿಕೊಟ್ಟಿದೆ. ಬೆಳಗ್ಗೆ ರಿಂದ 6ರವರೆಗೆ ಮಾತ್ರ ಮರಳು ಸಾಗಾಣಿಕೆಗೆ ಅವಕಾಶ ನೀಡಿದೆ.